ಶ್ರೀ ಎಂ. ವಿ. ವೆಂಕಟಪ್ಪ.—ಕೇಂದ್ರಾಯ ಅಧಿಕಾರಿಗಳು ೩೮,೨೮,೪೩೫ ರೂಪಾಯಿ ಎಂದು ಅಂದಾಜು ಏನು ಮಾಡಿದ್ದಾರೆ ಅದರ ಕಾಪಿ ನನ್ನ ಹತ್ತಿರ ಇದೆ. ಅದಕ್ಕೆ ಸೀಲ್ ಸಿಗ್ನೇಚರ್ ಅನ್ನೂ ಕೂಡ ಹಾಕಿದ್ದಾರೆ. ಅದನ್ನು ತಮಗೆ ಕಳಿಸಿಕೊಡುತ್ತೇನೆ. ಮತ್ತು ಇನ್ನೋಸೆಂಟ್ ಪೀಪಲ್ಸ್ ಅನ್ನು ಏನು ಅರೆಸ್ಟ್ ಮಾಡಿದ್ದಾರೆ ಅವರನ್ನು ಬಿಡುಗಡೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳ ಫಂಡ್‌ನಿಂದ ೨–೩ ಲಕ್ಷ ರೂಪಾಯಿಗಳನ್ನು ಈ ಜನರಿಗೆ ಕೊಟ್ಟರೆ ಅನುಕೂಲವಾದೀತು ಎಂದು ನನ್ನ ಭಾವನೆ.

SRI VEERENDRA PATIL.— Sir it is a suggestion for action.

ನಿಯಮ ೫೫ಳಿರ ಮೇರೆಗೆ

(೧) ಬೆಂಗಳೂರು ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗೆ ಕುಡಿಯುವ ನೀರಿನ ಸೌಕರ್ಯವಿಲ್ಲದೆ ಜನರಿಗೆ ತೊಂದರೆಯಾಗಿರುವುದು

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.— ಬೆಂಗಳೂರು ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗಡೆ ಕುಡಿಯುವ ನೀರಿನ ಸೌಕರ್ಯವಿಲ್ಲದಿರುವುದರಿಂದ ಪ್ರತಿದಿನವೂ ಸಾವಿರಾರು ಜನರು ಹಾಗೂ ಮಾರುಕಟ್ಟೆಗೆ ತರಕಾರಿ ಹಣ್ಣುಗಳನ್ನು ಮಾರಲೂ ಬರತಕ್ಕ ರೈತರಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಸರಕಾರದವರು ಕೂಡಲೇ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ಒಳಗೆ ಕೆಲವು ಸಾರ್ವಜನಿಕ ಕೊಳಾಯಿಗಳನ್ನು ಹಾಕಿಸಿ ಈ ಮಾರುಕಟ್ಟೆಗೆ ಬರತಕ್ಕ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ ಕೆ. ಆರ್. ಮಾರ್ಕೆಟ್ಟಿಗೆ ಬಂದು ಹೋಗತಕ್ಕಂತಹ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಮಾನ್ಯ ಮಲ್ಲಪ್ಪನವರು ಏನೋ ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಗರಪಾಲಿಕೆಗೆ ಹಾಗೂ ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನವರಿಗೆ ಯಥಾಪ್ರಕಾರ ಪಾಯಿಂಟ್‌ಗಳಲ್ಲಿ ಕೊಳಾಯಿಗಳನ್ನು ಹಾಕಬಹುದೆಂಬ ಬಗ್ಗೆ ಮಾರ್ಗ ಸೂಚಿಗಳನ್ನು ಹಾಕಿಕೊಡಿ ಎಂದು ಹೇಳುತ್ತೇನೆ. ಅವರು ವಿವರ ಕೊಟ್ಟ ತಕ್ಷಣ ಶೀಘ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

(೨) ಉಳ್ಳಾಲದಲ್ಲಿ ಕಡಲ ಕೊರೆತಕ್ಕೆ ತಡೆಗೋಡೆಯನ್ನು ನಿರ್ಮಿಸುವುದು ೧೨–೩೦ ಪಿ. ಎಂ.

ಶ್ರೀ ಜಿ.ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೆ, ಮಂಗಳೂರು ಕರಾವಳಿಯ ಉಳ್ಳಾಲದಲ್ಲಿ ಕಳೆದ ೩ ವರ್ಷಗಳಿಂದ ಕಡಲು ಕೊರೆತದಿಂದ ನೂರಾರು ಮನೆಗಳು, ಪೆಡ್ಡುಗಳು ನಾಶವಾಗಿ ಅಪಾರ ಹಾನಿಯಾಗಿದೆ. ಈ ವರ್ಷ ನಮ್ಮಲ್ಲಿ ಮಳೆ ಪ್ರಾರಂಭವಾಗಿ ಕಡಲು ಕೊರೆತ ಪ್ರಾರಂಭವಾಗಿ ಅನೇಕ ಮನೆಗಳಿಗೆ ತೆರೆಗಳು ಬಡಿಯುತ್ತಿವೆ. ಉಳ್ಳಾಲ ಕಡಲು ಕರಿಯ ಜನರೆಲ್ಲಾ ಭಯಭೀತರಾಗಿದ್ದಾರೆ. ಪುನಃ ಅಪಾರ ಹಾನಿಯಾಗುವ ಆಪಾಯವಿರುತ್ತದೆ. ಈ ಕುರಿತು ೨ ವರ್ಷಗಳಿಂದ ಕಡಲು ಕೊರೆತ ತಡೆಯಲು ತಡೆಗೋಡೆ ಕಟ್ಟಿಸಿಕೊಡಬೇಕೆಂದು ಕೇಳುತ್ತಾ ಬರಲಾಗಿದೆ. ಕೂಡಲೇ ಕೆಲಸ ಪ್ರಾರಂಭಿಸಲಾಗುವುದೆಂದು ಹೇಳಲಾಗಿದೆ. ಮಾನ್ಯ ರಾಜ್ಯಪಾಲರ ಅಧಿಕಾರ ಇರುವಾಗ ರಾಜ್ಯಪಾಲರು ಖುದ್ದಾಗಿ ಉಳ್ಳಾಲಕ್ಕೆ ಬಂದು ಈ ಕರಾಳ ಪರಿಸ್ಥಿತಿಯನ್ನು ನೋಡಿ, ೨೦ ಲಕ್ಷ ರೂ. ಹಣವನ್ನು ತಂತ್ರಾಗಿ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಪತ್ರಿಕೆಗಳಲ್ಲಿ ಅದು ಪ್ರಕಟವಾಗಿದೆ. ಆದರೆ ಈವರೆಗೆ ಆ ಹಣ ಬಂದಿಲ್ಲ. ತಡೆಗೋಡೆ ಕೆಲಸ ಪ್ರಾರಂಭವಿಲ್ಲ. ಆದಕಾರಣ ಆತಿ ತುರ್ತಾಗಿ ಉಳ್ಳಾಲದಲ್ಲಿ ಕಡಲು ಕೊರೆತದ ಹಾವಳಿ ತಪ್ಪಿಸಲು ತಡೆಗೋಡೆ ಕಟ್ಟಲು ಆದೇಶ ನೀಡಿ ಕೆಲಸ ಪ್ರಾರಂಭಿಸಬೇಕು. ಈ ಕುರಿತು ನೀರಾವರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಖಾತೆ ಸಚಿವರು)— ಕರ್ನಾಟಕ ರಾಜ್ಯದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಒಟ್ಟು ಕರಾವಳಿ ತೀರ ೩೦೦ ಕಿ. ಮೀ. ಇದ್ದು ಅಲ್ಲಲ್ಲಿ ಸಮುದ್ರ ಕೊರೆತದ ಹಾನಿಗೊಳಗಾದ ಒಟ್ಟು ೭೬ ಕಿ.ಮೀ. ತೀರ ಪ್ರದೇಶಗಳನ್ನು ಗುರುತಿಸಲಾಗಿದ್ದು ಇವುಗಳ ರಕ್ಷಣೆಗೆಂದು ಒಂದು ಸಮಗ್ರ ಯೋಜನೆಯನ್ನು ರೂ. ೧೪೫ ಕೋಟಿಗಳಿಗೆ ಸಿದ್ಧಪಡಿಸಲಾಗಿದೆ. ಇದನ್ನು ಅನುಮೋದನೆಗಾಗಿ ಭಾರತ ಸರ್ಕಾರದ